| Deposition Sheets (RP.No.57) Form No.4 |
|---|

**ADDL. CIVIL JUDGE & J.M.F.C., KUSHTAGI**

**Criminal Case No. 641/2017**

ಪಿ.ಡಬ್ಲ್ಯು : 10 ಸಿ.ಡಬ್ಲ್ಯು : 15

ಸಾಕ್ಷಿದಾರರ ಹೆಸರು : ದೊಡಪ್ಪ
ತಂದೆಯ ಹೆಸರು : ಯಮನಪ್ಪ
ಪ್ರಾಯ : 66 ವರ್ಷ
ಉದ್ಯೋಗ : ನಿವೃತ ಸಹಾಯಕ ಉಪನಿರೀಕ್ಷಕರು
ವಾಸ : ಕಷ್ಟಗಿ

ದಿನಾಂಕ 11.02.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಸಹಾಯಕ **ಸರ್ಕಾರಿ ಅಭಿಯೋಜಕರುಃ-**

ದಿಃ13.08.2015 ರಿಂದ 31.05.2019 ರ ವರೆಗೆ ನಾನು ತಾವರಗೇರಾ ಠಾಣೆಯಲ್ಲಿ ಸಹಾಯಕ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ**13.12.2016** ರಂದು ಮೃತ ಶ್ಯಾಮೀದ ಬಿ ಗಂಡ ರಾಜಸಾಬ ಲಾಟಿ ರವರ ಶವ ಪಂಚನಾಮೆಯನ್ನು ಚಾಸಾ**2** ರಿಂದ **4** ರವರ ಸಮಕ್ಷಮ ರಾತ್ರಿ**8.30** ರಿಂದ **10.15** ಗಂಟೆಯವರೆಗೆ ಶವ ಪಂಚನಾಮೆ ಜರುಗಿಸಿರುತ್ತೇನೆ. ಅದೇ ದಿನ ಚಾಸಾ-**9** ಮತ್ತು **10** ಮತ್ತು **1** ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ **2** ಎಂದು ಗುರುತಿಸಲಾಗಿದೆ ಸಹಿಗಳನ್ನು ಒಟ್ಟಾಗಿ **2** ಸಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು** : ಆರೋಪಿತರ ಪರ : ಶ್ರೀ ವಿ ಕೆ ಕೆ ವಕೀಲರಿಂದಃ

ಮೃತ ಶ್ಯಾಮೀದಬಿ ಯವರು ಮುದೇನೂರ ಸರ್ಕಾರಿ ಆಸ್ಪತ್ರೆಯಲ್ಲಿ ಮರಣಹೊಂದಿರುತ್ತಾರೆ. ಮುದೇನೂರು ಗ್ರಾಮದಲ್ಲಿ ಎಂ ಬಿ ಬಿ ಎಸ್ ವೈದ್ಯಾಧಿಕಾರಿಗಳು ಇಲ್ಲದಿರುವುದರಿಂದ ನಮ್ಮ ಮೇಲಾಧಿಕಾರಿಗಳು ಕುಷ್ಟಗಿ ಸರ್ಕಾರಿ

ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ ಕುಷ್ಟಗಿ ಸರ್ಕಾರಿ ಆಸ್ಪತ್ರೆಯಲ್ಲಿ ಪಂಚನಾಮೆ ಮಾಡಿರುತ್ತೇನೆ. ಸಾಮಾನ್ಯವಾಗಿ ಯಾವ ಆಸ್ಪತ್ರೆಯಲ್ಲಿ ವ್ಯಕ್ತಿ ಮರಣಹೊಂದುತ್ತಾನೆ ಅಲ್ಲೆ ಶವ ಪಂಚನಾಮೆ ಮಾಡುತ್ತೇವೆ ಎಂದರೆ ಸರಿಯಲ್ಲ. ಸಂದರ್ಭಕ್ಕೆ ತಕ್ಕಂತೆ ಶವ ಪಂಚನಾಮೆ ಜರುಗಿಸಿರುತ್ತೇವೆ. ಶವ ಪಂಚರನ್ನು ನಮ್ಮ ಸಿಬ್ಬಂದಿಯವರು ಕರೆದುಕೊಂಡು ಬಂದಿರುತ್ತಾರೆ. ಪಂಚರ ಹೆಸರನ್ನು ಶವ ಪಂಚನಾಮೆಯಲ್ಲಿ ನಮೂದಿಸಲಾಗಿರುತ್ತದೆ. ಶವ ಪಂಚನಾಮೆ ಕಾಲಕ್ಕೆ ಮೃತ ದೇಹವನ್ನು ಆಸ್ಪತ್ರೆಯಲ್ಲಿ ಕಟ್ಟೆಯ ಮೇಲೆ ಅಂಗಾತವಾಗಿ ಬಿದ್ದಿತ್ತು. ಚಾಸಾ-9 ಮತ್ತು 10 ಮತ್ತು 1 ರವರ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಚಾಸಾ 1 ರವರಿಗೂ ಕೂಡ ಗಾಯವಾಗಿರುವುದು ಕಂಡುಬಂದಿರುತ್ತದೆ. ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಶವ ಪರೀಕ್ಷೆ ಮಾಡುತ್ತಾರೆ ಅಂದರೆ ಅದು ವೈದ್ಯರಿಗೆ ಗೊತ್ತಿರುವ ವಿಚಾರ.

ನಾನು ಈ ಮೇಲೆ ಹೇಳಿದಂತೆ ಶವ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿರುವುದಿಲ್ಲ, ಠಾಣೆಯಲ್ಲಿ ಕುಳಿತು ಸುಳ್ಳು ಪಂಚನಾಮೆ ಜರುಗಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ

[